# 5

# ಪಾಪಭ್ಯಾಸದ ಮೇಲೆ ಜಯ

ಕ್ರೈಸ್ತರಾದ ನಾವುಗಳು ಅಪರಾಧ ಮನೋಭಾವದ ಮೇಲೆ ಮಾತ್ರ ಜಯವನ್ನು ಸಾಧಿಸದೆ, ಪಾಪಭ್ಯಾಸದ ಮೇಲೆಯೂ ಜಯವನ್ನು ಹೊಂದಿದ್ದೇವೆ. ಎಲ್ಲಿಯವರೆಗೆ? ಒಬ್ಬ ಕ್ರೈಸ್ತನು ಪಾಪ ಮಾಡದೆ ಇರಬಹುದೇ? ಅದು ಒಂದು ದ್ವಂದದ ಪ್ರಶ್ನೆಯಾಗಿದೆ. ಒಬ್ಬ ಕ್ರೈಸ್ತನು ಪಾಪ ಮಾಡಲು ಸಾಧ್ಯವೇ?

ಪತ್ರಿಕೆಯಲ್ಲಿನ ಅನೇಕ ವಚನಗಳು, ಪಾಪ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತವೆ:

> ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು; ಪಾಪಮಾಡುವವನು ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ (1 ಯೋಹಾನ 3:6).

> ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡದೆ.[1] ಅವನು ದೇವರಿಂದ ಹುಟ್ಟಿದ ಕಾರಣ ಪಾಪ ಮಾಡುವವನಾಗಿರಲಾರನು (1 ಯೋಹಾನ 3:9).

> ದೇವರಿಂದ ಹುಟ್ಟಿರುವವನು ಪಾಪಮಾಡುವವನಲ್ಲವೆಂಬುದು ನಮಗೆ ಗೊತ್ತದೆ … (1 ಯೋಹಾನ 5:18).

ಕೆಲವರು ಈ ವಾಕ್ಯಗಳನ್ನು ಅಕ್ಷರಶಃ ಪಾಲಿಸುತ್ತಾರೆ. ಒಬ್ಬನು ರಕ್ಷಣೆ ಹೊಂದಿದ ನಂತರ, ಅವನು ನಿರಂತರ ರಕ್ಷಣೆ ಹೊಂದಿದ್ದಾನೆ ಎಂದು ತಿಳಿಯುತ್ತಾರೆ. ಒಬ್ಬ ಕ್ರೈಸ್ತನು ತನ್ನ ರಕ್ಷಣೆಯನ್ನು ನಿತ್ಯವಾಗಿ ಕಳಕೊಳ್ಳುವ ಮಟ್ಟಿಗೆ ಪಾಪ ಮಾಡಲಾರನು. ಇದನ್ನು ಪ್ರತಿಪಾದಿಸುವವರು, ಈ ವಚನದ ಮೂಲಕ, ಒಬ್ಬ ಕ್ರೈಸ್ತನು ಪಾಪ ಮಾಡಲಾರನು ಎಂದು ವಾದಿಸುತ್ತಾರೆ. ಒಂದು ವೇಳೆ ಕ್ರೈಸ್ತನು ಪಾಪ ಮಾಡಿದರೆ? ಪಾಪ ಮಾಡಿದವನು ಕ್ರೈಸ್ತನಾಗಿರುವದಿಲ್ಲ, ಎಂಬ ಉತ್ತರ ನೀಡುವರು.

ಈ ಪ್ರತಿಪಾದನೆ ನ್ಯಾಯವಾಗಿದೆಯೇ? ಕ್ರೈಸ್ತನು ಪಾಪಮಾಡುವದು ಅಸಾಧ್ಯವೇ? ಮುಂದಿನ ಸರಳ ಕಾರ್ಯಗಳನ್ನು ಗಮನಿಸಿ.

(1) ಕ್ರೈಸ್ತನು ಪಾಪ ಮಾಡುವದು ಅಸಾಧ್ಯ ಎಂಬದು, ಅನುಭವಕ್ಕೆ ವಿರುದ್ಧವಾಗಿದೆ. ದೇವರ ಮಕ್ಕಳಾಗಿರುವ ನಾವುಗಳು ಪಾಪ ಮಾಡಿದ್ದೇವೆ, ಕ್ರೈಸ್ತರಾಗಿರುವ ಇತರರು ಸಹ ಪಾಪ ಮಾಡಿರುವದನ್ನು ನಾವು ಅರಿತಿದ್ದೇವೆ. ಹೊಸ ಒಡಂಬಡಿಕೆಯಲ್ಲಿನ ಶಿಷ್ಯರುಗಳು ಪಾಪ ಮಾಡಿರುವ ಸಾಕ್ಷಿಗಳನ್ನು ನೋಡಿದ್ದೇವೆ.[2]

(2) ಕ್ರೈಸ್ತರು ಪಾಪ ಮಾಡಬಾರದೆಂದು ಹೊಸ ಒಡಂಬಡಿಕೆಯಲ್ಲಿ ಹೇಳಲಾಗಿದೆ.

(3) ನಿತ್ಯತ್ವವನ್ನು ಕಳಕೊಳ್ಳಬಹುದಾದ ಪಾಪವನ್ನು ಕ್ರೈಸ್ತನು ಮಾಡುವನು ಎಂಬ ವಿಷಯವು, ಸತ್ಯವೇದದ ಇತರೆ ವಾಕ್ಯಗಳಿಗೆ ತದ್ವಿರುದ್ಧವಾಗಿದೆ.[3] ಕ್ರೈಸ್ತನು ಪಾಪಮಾಡನು ಎಂಬದನ್ನು ಅಕ್ಷರಶಃ ಯೋಚಿಸಿದರೆ, ಯೋಹಾನನ ಪತ್ರಿಕೆಯು ತದ್ವಿರುದ್ಧ ವಾದದ್ದನ್ನೇ ಹೇಳುವಂತಾಗುತ್ತದೆ.

ನಮ್ಮಲ್ಲಿ, 1 ಯೋಹಾನ 1:8, "ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ." ಅವನು ಈ ರೀತಿ ದೃಢವಾಗಿ ಹೇಳಿದ್ದಾನೆ 1:10, "ನಾವು ಪಾಪಮಾಡಲಿಲ್ಲವೆಂದು ಹೇಳಿದರೆ ಆತನನ್ನು

ಸುಳ್ಳುಗಾರನನ್ನಾಗಿ ಮಾಡುತ್ತೇವೆ, ಮತ್ತು ಆತನ ವಾಕ್ಯವು ನಮ್ಮಲ್ಲಿ ಇಲ್ಲ." ಕ್ರೈಸ್ತರು ಪಾಪ ಮಾಡುವರು ಎಂದು ಯೋಹಾನನು ತಿಳಿಸುತ್ತಾನೆ.

ಆದರೆ, "ಆತನಲ್ಲಿರುವವರು ಪಾಪ ಮಾಡರು" ಎಂಬ ಹೇಳಿಕೆಯ ಅರ್ಥವೇನು? ದೇವರಿಂದ ಹುಟ್ಟಿದವನು ಪಾಪ ಮಾಡಲಾರನು? ಇದರ ಅರ್ಥವೇನು. ಕ್ರೈಸ್ತರು ಪಾಪ ಮಾಡುವರು ಎಂಬ ಯೋಹಾನನ ಹೇಳಿಕೆಯಲ್ಲಿ: "ಕ್ರೈಸ್ತನು ಪಾಪ ಮಾಡುತ್ತಲೇ ಇರುವದಿಲ್ಲ; ಅದು ಅವರ ಜೀವನದ ಪರಿಪಾಠವಿಲ್ಲ" ಆ ಹೇಳಿಕೆಯಲ್ಲಿ ಮೂರು ನಾಮ ಪದಗಳನ್ನು ವರ್ತನಮಾನ ಕಾಲದಲ್ಲಿ ಬರೆಯಲಾಗಿದೆ, ಅಂದರೆ ಪಾಪವನ್ನು ಮುಂದುವರೆಸುವದು ಎಂಬ ಅರ್ಥವಾಗಿದೆ.[4] ನಂಬಿಗಸ್ತನಾದ ಒಬ್ಬ ಕ್ರೈಸ್ತನು ಪಾಪಮಾಡುವದನ್ನು ಪರಿಪಾಠ ಮಾಡಿಕೊಳ್ಳುವದಿಲ್ಲ. ಪ್ರಚಲಿತ ಅನುವಾದದಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ.

> ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು ... (1 ಯೋಹಾನ 3:6; ESV).
>
> ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು (1 ಯೋಹಾನ 3:9; ESV).
>
> ದೇವರಿಂದ ಹುಟ್ಟಿರುವವನು ಪಾಪಮಾಡುವವನಲ್ಲವೆಂಬದು ನಮಗೆ ಗೊತ್ತದೆ. ದೇವರಿಂದ ಹುಟ್ಟಿದಾತನು ಅವನನ್ನು ಕಾಪಾಡುವನು ... (1 ಯೋಹಾನ 5:18; ESV).[5]

ಒಬ್ಬ ಕ್ರೈಸ್ತನು ಪಾಪ ಮಾಡದೆ ಮುಂದುವರೆಯುವದು ಹೇಗೆ? ಕ್ರಿಸ್ತನ ಸಹಾಯದಿಂದ ಪಾಪ ಮಾಡದೆ ಇರಬಹುದು.

## ಕ್ರಿಸ್ತನು ನಮಗಾಗಿ ಏನು ಮಾಡಿರುವನು?

ಕ್ರೈಸ್ತನಾದವನು ನೀತಿವಂತನಾಗಿ ಹೇಗೆ ಜೀವಿಸಬಹುದು ಎಂದು ಓದುತ್ತೇವೆ. 1 ಯೋಹಾನ 5:18 ರ ಪ್ರಕಾರ ಜೀವದಿಂದ ಹುಟ್ಟಿರುವವನು ಪಾಪ ಮಡುವವನಲ್ಲವೆಂದು ನಮಗೆ ಗೊತ್ತದೆ, ದೇವರಿಂದ ಹುಟ್ಟಿದಾತನು ಅವನನ್ನು ಕಾಪಾಡುವನು ಕ್ರಿಸ್ತನೇ ಇದನ್ನು ನಮ್ಮಲ್ಲಿ ಸಾಧಿಸುವನು. ಪುನಃ 1 ಯೋಹಾನ 3:8 ಯೇಸು ಸೈತಾನನ ಕಾರ್ಯಗಳನ್ನು ಲಯ ಮಾಡಲು ಬಂದನು. ಸೈತಾನನು ತರುವ ಪಾಪದ ಶೋಧನೆಗಳಿಂದ ಬಿಡಿಸಿ, ನಮಗೆ ಜಯ ಕೊಡಲು ಆತನು ಬಂದನು. 1 ಯೋಹಾನ 3:9 ರಲ್ಲಿ, "ದೇವರಿಂದ ಹುಟ್ಟಿದವನು ಪಾಪ ಮಾಡನು, ಯಾಕಂದರೆ ದೇವರ ಜೀವವು ಅವನಲ್ಲಿ ನೆಲೆಗೊಂಡಿದೆ." ಆ ಜೀವವು ಏನೇ ಆಗಿರಲಿ ಅದು ಪಾಪದಲ್ಲಿ ಜೀವಿಸದಂತೆ ಮಾಡಿ ಕ್ರಿಸ್ತನಿಗಾಗಿ ಜೀವಿಸುವಂತೆ ಮಾಡುತ್ತದೆ.

ಪಾಪದ ಮೇಲೆ ಜಯ ಸಾಧಿಸುವಂತೆ, ಈ ವಚನವು ನಮಗೆ ಬೋಧಿಸುತ್ತದೆ. ನಮ್ಮ ಸ್ವಂತ ಸಾಮರ್ಥ್ಯದಿಂದಲ್ಲ, ಕ್ರಿಸ್ತನ ನಿಮಿತ್ತವಾಗಿ ಜಯ ಸಾಧಿಸಬಹುದಾಗಿದೆ! 1 ಯೋಹಾನ 4:4, "ಪ್ರಿಯರಾದ ಮಕ್ಕಳೇ, ನೀವಂತೂ ದೇವರಿಂದ ಹುಟ್ಟಿದವರಾಗಿದ್ದೀರಿ ಮತ್ತು ಲೋಕದಲ್ಲಿರುವವನಿಗಿಂತ ನಿಮ್ಮಲ್ಲಿರುವಾತನು ಹೆಚ್ಚಿನವನಾಗಿರುವದರಿಂದ ಸುಳ್ಳು ಪ್ರವಾದಿಗಳನ್ನು ಜಯಿಸಿದ್ದೀರಿ." ಯೇಸು ದೊಡ್ಡವನಾಗಿರುವದರಿಂದ ಲೋಕದಲ್ಲಿನ ಪಾಪವನ್ನು ಜಯಿಸಿದ್ದೀರಿ!

## ಹಾಗಾದರೆ ನಾವೇನು ಮಾಡಬೇಕು?

ಪಾಪಭ್ಯಾಸದ ಮೇಲೆ ಜಯವನ್ನು ಸಾಧಿಸಬೇಕಾದರೆ, ದೇವರ ಚಿತ್ತವನ್ನು ಪಾಲಿಸಿ, ನಮ್ಮ ಜೀವಿತದಲ್ಲಿರುವ ಪಾಪದ ಮೇಲೆ ಜಯಹೊಂದಬೇಕು. ಪಾಪ ಮಾಡಬಾರದೆಂದು

ಯೋಹಾನನು ತನ್ನ ಓದುಗರಿಗೆ ಮನವಿ ಮಾಡಿರುವನು. ಅವರು ಪಾಪ ಮಾಡುವದಿಲ್ಲ ಎಂದು ಅವನು ಬರೆದನು (1 ಯೋಹಾನ 2:1). ಪಾಪದ ಕತ್ತಲೆಯಲ್ಲಿ ನಡೆಯದೆ, ಬೆಳಕಿನಲ್ಲಿ ನಡೆಯಬೇಕೆಂದನು (1 ಯೋಹಾನ 1:6, 7). ಪಾಪದ ಸಂಗತಿಗಳನ್ನು ಪ್ರೀತಿಸಬಾರದು ಎಂದನು (1 ಯೋಹಾನ 2:15-17). ನೀತಿಯನ್ನು ಅಭ್ಯಾಸ ಮಾಡಿರಿ ಎಂದು ಬೆಂಬಲಿಸಿದನು (1 ಯೋಹಾನ 2:29). ಪಾಪವನ್ನು ತ್ಯಜಿಸಿ ನೀತಿಯಲ್ಲಿ ಜೀವಿಸಿರಿ ಎಂದು ನಾಲ್ಕು ಕಾರಣಗಳನ್ನು 1 ಯೋಹಾನ 3ರಲ್ಲಿ ನೀಡಿರುವನು.

## ಯಾಕಂದರೆ ನಮ್ಮ ಮುಂದಿರುವ ನಿರೀಕ್ಷೆಗಾಗಿ (3:1-3)

> ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ. ಈ ಕಾರಣದಿಂದ ಲೋಕವು ನಮ್ಮನ್ನು ತಿಳಿದುಕೊಳ್ಳುವದಿಲ್ಲ, ಅದು ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ. ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ; ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು. ಆತನ ಮೇಲೆ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ.

ಕ್ರಿಸ್ತನು ಹಿಂದಿರುಗುವಾಗ, ನಾವು ಸಹ "ಆತನ ಹಾಗೆ" ಆಗುವೆವು, ಆತನು ನಿರ್ಮಲನಾಗಿರುವಂತೆ, ನಾವುಗಳು ಆಗುವೆವು. ಆತನು ನಮ್ಮನ್ನು ಅಂಗೀಕರಿಸಿಕೊಳ್ಳಲು ಯೋಗ್ಯರಾಗಿರುವೆವು.[6]

## ಯಾಕೆಂದರೆ ಆತನೊಂದಿಗಿರುವ ನಮ್ಮ ಸಂಬಂಧ (3:4-10)

> ಪಾಪಮಾಡುವ ಪ್ರತಿಯೊಬ್ಬನು ಅಧರ್ಮವನ್ನು ಮಾಡುವವನಾಗಿದ್ದಾನೆ; ಪಾಪವು ಅಧರ್ಮವೇ. ಪಾಪಗಳನ್ನು ಹೋಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ. ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು; ಪಾಪಮಾಡುವವನು ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ. ಪ್ರಿಯರಾದ ಮಕ್ಕಳೇ, ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವದಕ್ಕೆ ಯಾರಿಗೂ ಅವಕಾಶಕೊಡಬೇಡಿರಿ. ಕ್ರಿಸ್ತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು ನೀತಿವಂತನಾಗಿದ್ದಾನೆ. ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಸೈತಾನನು ಪಾಪಮಾಡುವವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು. ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು. ಇವರು ದೇವರ ಮಕ್ಕಳೆಂಬದೂ ಅವರು ಸೈತಾನನ ಮಕ್ಕಳೆಂಬದೂ ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ ತನ್ನ ಸಹೋದರನನ್ನು ಪ್ರೀತಿಸದವನೂ ದೇವರಿಂದ ಹುಟ್ಟಿದವರಲ್ಲ.

ಎರಡು ಗುಂಪಿನ ನಡುವೆ ಇರುವ ವ್ಯತ್ಯಾಸಗಳನ್ನು ಯೋಹಾನನು ಇಲ್ಲಿ ಚಿತ್ರಿಸಿದ್ದಾನೆ. ದೇವರ ಮಕ್ಕಳ ಗುಂಪಿನವರು, ಹೇಗೆ ಜೀವಿಸುವರು? ಅವರಲ್ಲಿ ಪಾಪದ ಪರಿಪಾಠವಿಲ್ಲ, ಆದರೆ ನೀತಿಯ ಪರಿಪಾಠವಿದೆ. ಸೈತಾನನ ಗುಂಪಿನವರು ಅವರು ಪಾಪದ ಪರಿಪಾಠದವರು. ನಾವು ಸೈತಾನನ ಮಕ್ಕಳಾಗದೇ, ದೇವರ ಮಕ್ಕಳಾಗಿರುವದರಿಂದ, ಪಾಪದ ಪರಿಪಾಠ

ಅಸಂಬದ್ಧವಾಗಿದೆ, ಯಾಕೆಂದರೆ ಅವರು ದೇವರೊಂದಿಗೆ ಅನ್ಯೋನ್ಯತೆಯಲ್ಲಿದ್ದಾರೆ - ನಾವು ಆತನ ಮಕ್ಕಳಾಗಿರುವದರಿಂದ, ಪಾಪದಿಂದ ದೂರವಾಗಿರಬೇಕು. ಪಾಪದಲ್ಲಿ ಜೀವಿಸಿ, ನೀತಿವಂತನು ಎಂದು ಹೇಳಿ ಕೊಳ್ಳುವದು ಹಾಸ್ಯಸ್ಪದವಾಗಿದೆ.

### ಯಾಕೆಂದರೆ ಇತರರೊಂದಿಗಿನ ನಮ್ಮ ಪರಸ್ಪರ ಸಂಬಂಧದ ಕಾರಣ (3:11-18)

> ನಾವು ಒಬ್ಬರನ್ನೊಬ್ಬರು ಪ್ರಿತಿಸಬೇಕೆಂಬದೇ ನೀವು ಮೊದಲನಿಂದಲೂ ಕೇಳಿದ ವಾಕ್ಯವಾಗಿದೆ. ಕೆಡುಕನಿಂದ ಹುಟ್ಟಿ ತನ್ನ ತಮ್ಮನನ್ನು ಕೊಂದುಹಾಕಿದ ಕಾಯಿನನಂತೆ ನಾವು ಇರಬಾರದು. ಯಾವ ಕಾರಣದಿಂದ ಅವನನ್ನು ಕೊಂದುಹಾಕಿದನು? ತನ್ನ ಕೃತ್ಯಗಳು ಕೆಟ್ಟವುಗಳೂ ತನ್ನ ತಮ್ಮನ ಕೃತ್ಯಗಳು ನೀತಿಗೆ ಸರಿಯಾದವುಗಳೂ ಆಗಿದ್ದದರಿಂದಲೇ.
>
> ಸಹೋದರರರೇ, ಲೋಕವು ನಿಮ್ಮನ್ನು ದ್ವೇಷಿಸಿದರೆ ಆಶ್ಚರ್ಯಪಡಬೇಡಿರಿ. ನಾವಂತೂ ಕ್ರೈಸ್ತ ಸಹೋದರರರನ್ನು ಪ್ರೀತಿಸುವವರಾಗಿರುವದರಿಂದ ಮರಣದಿಂದ ಪಾರಾಗಿ ಜೀವದಲ್ಲಿ ಸೇರಿದ್ದೇವೆಂಬದು ನಮಗೆ ಗೊತ್ತಾಗಿದೆ. ಪ್ರೀತಿಸದ ಇರುವವನು ಮರಣದಲ್ಲೇ ಇದ್ದಾನೆ. ತನ್ನ ಸಹೋದರನ್ನು ದ್ವೇಷಿ ಸುವವನು ಕೊಲೆಗಾರನಾಗಿದ್ದಾನೆ, ಮತ್ತು ಯಾವ ಕೊಲೆಗಾರನಲ್ಲಿಯೂ ನಿತ್ಯಜೀವವು ಇರುವದಿಲ್ಲವೆಂಬದು ನಿಮಗೆ ಗೊತ್ತಾಗಿದೆ. ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ. ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ? ಪ್ರಿಯರಾದ ಮಕ್ಕಳೇ, ನಾವು ಬರೀ ಮಾತಿನಿಂದಾಗಲಿ ಬಾಯಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು.

ಪ್ರೀತಿ ಇಲ್ಲದೆ ಇರುವದೆ, ಬಹು ಕೆಟ್ಟ ಪಾಪವೆಂದು ಯೋಹಾನನು ಪ್ರಸ್ತಾಪಿಸಿರುವನು. ನಮ್ಮ ಸಹೋದರನನ್ನು ದ್ವೇಷಿಸಿದರೆ, ನಾವು ಕೊಲೆಗಾರರೇ ನಮ್ಮ ಸಹೋದರನನ್ನು ಪ್ರೀತಿಸಿ, ಪಾಪ ಮಾಡುವದನ್ನು ತಡೆಗಟ್ಟಬಹುದಾಗಿದೆ. ಪರಸ್ಪರ ಅನ್ಯೋನ್ಯತೆಯಿಂದ, ಅವರು ನಮ್ಮ ಸಹೋದರ ಸಹೋದರಿಯರಾಗಿರುವದರಿಂದ ಅವರನ್ನು ಪ್ರೀತಿಸುವ ಮೂಲಕ,[7] ನೀತಿಯನ್ನು ಅಭ್ಯಾಸ ಮಾಡುವವರಾಗಿದ್ದೇವೆ.

### ಪ್ರಚಲಿತ ಆಶೀರ್ವಾದದ ನಿಮಿತ್ತ (3:19-24)

> ನಾವು ಸತ್ಯಕ್ಕೆ ಸೇರಿದವರೆಂಬದು ಇದರಿಂದಲೇ ನಮಗೆ ತಿಳಿಯುತ್ತದೆ. ಮತ್ತು ನಮ್ಮ ಹೃದಯವು ಯಾವ ವಿಷಯದಲ್ಲಿಯಾದರೂ ನಮ್ಮನ್ನು ದೋಷಿಗಳೆಂದು ನಿರ್ಣಯಿಸಿದರೂ ದೇವರು ನಮ್ಮ ಹೃದಯಕ್ಕಿಂತ ದೊಡ್ಡವನಾಗಿದ್ದು ಎಲ್ಲವನ್ನೂ ಬಲ್ಲವನಾಗಿದ್ದಾನೆಂದು ನಾವು ತಿಳಿದು ದೇವರ ಸಮಕ್ಷಮದಲ್ಲಿ ನಮ್ಮ ಹೃದಯವನ್ನು ಸಮಾಧಾನಪಡಿಸುವೆವು. ಪ್ರಿಯರೇ, ನಮ್ಮ ಹೃದಯವು ನಮ್ಮನ್ನು ದೋಷಿಗಳೆಂದು ನಿರ್ಣಯಿಸದಿದ್ದರೆ ನಮಗೆ ದೇವರ ವಿಷಯದಲ್ಲಿ ಧೈರ್ಯವುಂಟು. ಮತ್ತುನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವವರಾಗಿರುವದರಿಂದ ಏನು ಬೇಡಿ ಕೊಂಡರೂ ಆತನಿಂದ ಹೊಂದುವೆವು.
>
> ದೇವರ ಆಜ್ಞೆಯಾವದಂದರೆ ನಾವು ಆತನ ಮಗನಾದ ಯೇಸು ಕ್ರಿಸ್ತನ ಹೆಸರನ್ನು ನಂಬಿ ಕ್ರಿಸ್ತನು ನಮಗೆ ಅಪ್ಪಣೆಕೊಟ್ಟ ಪ್ರಕಾರ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ. ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ,

ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು.

ಈ ಕೆಳಕಂಡ ಆಶೀರ್ವಾದಗಳನ್ನು ಈ ವಾಕ್ಯದಲ್ಲಿ ತಿಳಿಸಲಾಗಿದೆ:

(1) ದೇವರಿಂದ ಮಾನ್ಯತೆ ಪಡೆದವರು (ವಚನಗಳು 21, 22),
(2) ಪ್ರಾರ್ಥನೆಗೆ ಉತ್ತರದ ಭರವಸೆ (ವಚನ 22),
(3) ದೇವರು ನಮ್ಮೊಂದಿಗಿದ್ದಾನೆ ಎಂಬ ವಾಗ್ದಾನ (ವಚನ 24ಬಿ),[8]
(4) ದೇವರು ತಮ್ಮ ಮಕ್ಕಳಿಗೆ ಪರಿಶುದ್ಧಾತ್ಮನನ್ನು ನೀಡಿದ್ದಾನೆ (ವಚನ 24ಬಿ),

ದೇವರ ವಾಗ್ದಾನಗಳು ನಮ್ಮೊಂದಿಗಿರುವದರಿಂದ, ನಾವು ಪಾಪಮಾಡದೆ ನೀತಿವಂತರಾಗಿ ಜೀವಿಸಬೇಕು, ಅಥವಾ ನಾವು ಆತನ ಆಜ್ಞೆಗಳನ್ನು ಪಾಲಿಸಬೇಕು ಎಂದು ಯೋಹಾನನು ತಿಳಿಸಿದನು. ದೇವರು ಮೆಚ್ಚುವ ಕಾರ್ಯಗಳನ್ನು ಮಾಡಿರಿ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಮತ್ತು "ಪರಸ್ಪರ ಪ್ರೀತಿಸಿರಿ."

## ಮುಕ್ತಾಯ

ಕ್ರಿಸ್ತನ ಮೂಲಕ ಪಾಪಭ್ಯಾಸದ ಮೇಲೆ ಜಯ ಹೊಂದಬಹುದು, ಕ್ರೈಸ್ತರಾದ ತಕ್ಷಣ ನೀತಿಯಲ್ಲಿ ಜೀವಿಸಲು ಸಾಧ್ಯವಿಲ್ಲ. ನಾವು ದೇವರ ಚಿತ್ತವನ್ನು ಪಾಲಿಸಿ "ಬೆಳಕಿನಲ್ಲಿ ನಡೆಯ ಬೇಕು" (1 ಯೋಹಾನ 1:7). ನಾವು ಉತ್ತಮವಾದದ್ದನ್ನು ಮಾಡುವಾಗ, ನಮ್ಮ ಜೀವಿತದ ಮೇಲಿನ ಪಾಪದ ಮೇಲೆ ಜಯ ಹೊಂದಬಹುದು.

---

ಟಿಪ್ಪಣೆಗಳು

[1]J. W. Roberts ದೇವರ ಸ್ವಭಾವವೆಂಬ ಬೀಜ (RSV) ಇದರಿಂದ ಕ್ರೈಸ್ತರು ಪರಿವರ್ತನೆಗೊಳ್ಳುವರು ಕೆಲವರು ಅದನ್ನು ಆತನ ಪುತ್ರ ಅಥವಾ ಆತನ ಆತ್ಮ ಎಂದು ತಿಳಿದಿರುವರು, ದೈವಶಾಸ್ತ್ರದ ಪ್ರಕಾರ "ಅದು ದೇವರ ವಾಕ್ಯವಾಗಿದೆ" (ನೋಡಿ ಲೂಕ 8:11; 1 ಪೇತ್ರ 1:23). (J. W. Roberts, *The Letters of John,* The Living Word Commentary [Austin, Tex.: R. B. Sweet Co., 1968], 85.) [2]ನೋಡಿ ಉದಾಹರಣೆಗೆ (ಅಪೊಸ್ತಲರ ಕೃತ್ಯಗಳು 8:12-24). [3]ನೋಡಿ ಉದಾಹರಣೆಗೆ ಗಲಾತ್ಯ 5:4; ಇಬ್ರಿಯ 6:4-6; ಯಾಕೋಬ 5:19, 20. [4] ಅನೇಕ ವ್ಯಾಖ್ಯಾನ ಕತೃರು ಇದನ್ನು ಒಪ್ಪುಕೊಳ್ಳುತ್ತಾರೆ. ಇಲ್ಲಿ ಪಾಶ್ಚಾತಾಪವಿಲ್ಲದ ಸ್ವಭಾವದ ಬಗ್ಗೆ ತಿಳಿಸಲಾಗಿದೆ ಎಂದು Thomas F. Johnson ಹೀಗೆ ಬರೆದಿರುವನು, "ಈ ಗ್ರಂಥ ಕರ್ತನು ಕ್ರಿಯಾಪದವನ್ನು ವರ್ತಮಾನಕಾಲದಲ್ಲಿ ಬಳಸಿರುವನು (ಪಾಪದ ಮುಂದುವರಿಯುವದು) ... ಪಾಪದ ಅಭ್ಯಾಸದ ಕುರಿತು ಒತ್ತಿ ಹೇಳಿದನು" (Thomas F. Johnson, *1, 2, and 3 John,* New International Biblical Commentary [Peabody, Mass.: Hendrickson Publishers, 1993], 71; emphasis removed). ಇತರ ವಿವರಣೆಯನ್ನು F. F. Bruce, *The Epistles of John: Introduction, Exposition and Notes* (N.p.: Pickering & Inglis, 1970; reprint, Grand Rapids, Mich.: Wm. B. Eerdmans Publishing Co., 1986), 90, and Roberts, 82 ರಲ್ಲಿ ಕೊಟ್ಟರು. ವ್ಯಾಕರಣ, ದೈವಶಾಸ್ತ್ರ ಹಾಗೂ ಪರಿಸ್ಥಿತಿಗೆ ಅನುಗುಣ ಎಂಬ ಮೂರು ಅರ್ಥವನ್ನು Stephen S. Smalley, *1, 2, 3 John,* Word Biblical Commentary (Waco, Tex.: Word Books, 1984), 158-64ರಲ್ಲಿ ಕೊಟ್ಟರು. [5]CEV ಅನುವಾದದ ಪ್ರಕಾರ, "ದೇವರ ಮಕ್ಕಳು ಪಾಪದಲ್ಲಿ ಮುಂದುವರೆಯಲಾರರು ... ಅವರು ಪಾಪವನ್ನು ಮಾಡುತ್ತಿರಲಾರರು" ಮತ್ತು 5:18ಎ ರಲ್ಲಿ, "ದೇವರ ಮಕ್ಕಳು ಪಾಪವನ್ನು ಮಾಡುತ್ತಿರಲಾರರು." J.B. Phillips ಅನುವಾದವು 3:6ರನ್ನು "ಕ್ರಿಸ್ತನಲ್ಲಿ ಜೀವಿಸುವವನು ಪಾಪಮಾಡುವದನ್ನು ಅಭ್ಯಾಸಿಸುವುದಿಲ್ಲ" ಎಂದು ಹೇಳಿದೆ NIV ಇದೇ ವಚನವನ್ನು ಹೀಗೆ ಭಾಷಾಂತರಿಸಿದೆ, "ಆತನಲ್ಲಿ ಜೀವಿಸುವವನು ಪಾಪಮಾಡುತ್ತಿರಲಿಲ್ಲ ಪಾಪ ಮಾಡುವವನ್ಯಾರು ಆತನನ್ನು ನೋಡುವುದಿಲ್ಲ ಅಥವಾ ಆತನನ್ನು ಅರಿಯುವುದಿಲ್ಲ" (3:6); "ದೇವರ ಮೂಲಕ

ಹುಟ್ಟಿದವನ್ಯಾರು ಪಾಪದಲ್ಲಿ ಮುಂದುವರಿಯುವದಿಲ್ಲ..." (3:9); "ದೇವರಿಂದ ಹುಟ್ಟಿದವನ್ಯಾರು ಪಾಪದಲ್ಲಿ ಮುಂದುವರೆಯುವುದಿಲ್ಲ ..." (5:18). [6]ಮೊದಲನೆಯ ಯೋಹಾನದ ಕಡೇ ವಿಚಾರಗಳ ಕುರಿತು ಬೋಧಿಸಿ, (2:18), ಎರಡನೇ ಬರೋಣ (1 ಯೋಹಾನ 3:1, 2; 2:28), ಕಡೇಯ ನ್ಯಾಯ ತೀರ್ಪು (4:17), ಮತ್ತು ಕಡೇಯ ಗಳಿಗೆಯ ಬಗ್ಗೆ ತಿಳಿಸಿರುವನು (2:17), ನಿತ್ಯ ದೈವದ ಬಗ್ಗೆಯೂ ತಿಳಿಸಿದನು (2:25). [7]ಹೋಲಿಸಿ ಯಾಕೋಬ 2:14-17. [8]ದೇವರ ಅನ್ಯೋನ್ಯತೆಗೆ ಪವಿತ್ರಾತ್ಮನೆ ಮೂಲ 4:13, ಪವಿತ್ರಾತ್ನ ಕುರಿತು 2:20, 27, "ಅಭಿಷೇಕ" ಎಂದಿರುವನು. ಅಂತರ್ಯದಲ್ಲಿರುವ ಪವಿತ್ರಾತ್ಮ (ನೋಡಿರಿ ರೋಮಾಪುರ 5:5; 8:13, 26; ಅಪೊಸ್ತಲರ ಕೃತ್ಯಗಳು 2:38; 5:32; ಗಲಾತ್ಯ 4:6; 2 ತಿಮೊಥೆ 1:14). (Roberts 100-101.)

---

## ಪಾಪದ ನಿಮಿತ್ತ ಸೋಲನ್ನು ಅನುಭವಿಸಿದಾಗ

ಕ್ರೈಸ್ತನು ಪಾಪದ ಮೇಲೆ ಜಯವನ್ನು ಹೊಂದಬಹುದು ಎಂಬ ಒಳ್ಳೆಯ ಸುದ್ದಿಯನ್ನು ಕೇಳಿದ ನಂತರ, ಪಾಪದ ಕುರಿತ ಒಂದು ಕೆಟ್ಟ ಸುದ್ದಿಯನ್ನು ಸಹ ತಿಳಿಸಿರುವನು. ನಾವು ಜ್ಞಾನವಿಲ್ಲದವರಾದರೆ, ಪಾಪವು ನಮ್ಮನ್ನು ಸೋಲಿಸುತ್ತದೆ. ಯುದ್ಧದಲ್ಲಿ ಸೈತಾನನು ಹಾಗೂ ಪಾಪವು ಜಯ ಸಾಧಿಸುವ ಸಾಧ್ಯತೆಗಳಿವೆ. ಪಾಪವು ಮರಣಕ್ಕೆ ನಡಿಸುತ್ತದೆ ಎಂಬುದರ ಕುರಿತು:

> ಯಾವನಾದರೂ ತನ್ನ ಸಹೋದರನು ಮರಣಕರವಲ್ಲದ ಪಾಪಮಾಡುವದನ್ನು ಕಂಡರೆ ಅವನು ದೇವರನ್ನು ಬೇಡಿಕೊಳ್ಳಲಿ; ಆಗ ದೇವರು ಮರಣಕರವಲ್ಲದ ಪಾಪಮಾಡುವವರಿಗೆ ಜೀವವನ್ನು ದಯಪಾಲಿಸುವನು. ಮರಣಕರವಾದ ಪಾಪವುಂಟು; ಈ ಪಾಪದ ವಿಷಯವಾಗಿ ಬೇಡಿಕೊಳ್ಳಬೇಕೆಂದು ನಾನು ಹೇಳುವದಿಲ್ಲ. ನೀತಿಗೆ ವಿರುದ್ಧವಾದದ್ದೆಲ್ಲಾ ಪಾಪವಾಗಿದೆ; ಆದರೂ ಮರಣಕರವಲ್ಲದ ಪಾಪವುಂಟು (1 ಯೋಹಾನ 5:16, 17).

## "ಮರಣಕ್ಕೆ ನಡೆಸುವ ಪಾಪ" ಎಂಬುದರ ಅರ್ಥವೇನು?

"ಮರಣಕ್ಕೆ ನಡೆಸುವ ಪಾಪ" ಎಂದರೇನು? ಯೋಹಾನನು ತಿಳಿಸಿದಂತೆ ನಾವು ಬೆಳಕಿನಲ್ಲಿ ನಡೆದರೆ "ಯೇಸುವಿನ ರಕ್ತವು ಸಕಲ ಪಾಪಗಳನ್ನು ಶುದ್ಧಿ ಮಾಡುತ್ತದೆ" (1 ಯೋಹಾನ 1:7). ಹಾಗೂ ನಾವು ಪಾಪಗಳನ್ನು ಅರಿಕೆ ಮಾಡಿದರೆ, ದೇವರು ನಂಬಿಗಸ್ತನು, ನೀತಿವಂತನೂ ಆಗರುವದರಿಂದ ಆತನು ನಮ್ಮನ್ನು ಕ್ಷಮಿಸಿ, "ಸಕಲ ಅನೀತಿಯನ್ನು ನಿವಾರಣೆ ಮಾಡುವನು" (1 ಯೋಹಾನ 1:9).

ಪಶ್ಚಾತ್ತಾಪ ಪಡಬಹುದಾದ ಪಾಪವನ್ನು ಹೊರತು ಪಡಿಸಿ, ಹೊಸ ಒಡಂಬಡಿಕೆ ಕಠಿಣ ವಾದ ಹೃದಯ (ಇಬ್ರಿಯ 3:12, 13) ಅಥವಾ ಸತ್ತು ಹೋದ ಮನಸ್ಸಾಕ್ಷಿ (1 ತಿಮೊಥೆ 4:2). ಅಧರ್ಮವು ಸಹ ಪಶ್ಚಾತ್ತಾಪವನ್ನು ಹೊರತು ಪಡಿಸುತ್ತದೆ (ಇಬ್ರಿಯ 6:4-6). ಒಬ್ಬ ಕ್ರೈಸ್ತನು ತೀವ್ರವಾದ ಪಾಪವನ್ನು ಮಾಡುವವನಾದರೆ, ಅವನು ಮರಣಕ್ಕೆ ಒಳಗಾಗುವ ಪಾಪವನ್ನು ಮಾಡಿದ್ದಾನೆ, ಅಂಥವನು ಮರಣಕ್ಕೂ ನರಕಕ್ಕೂ ಪಾತ್ರನೇ (ಅವನು ಮನೋಭಾವ ಬದಲಾಯಿಸದ ಹೊರತು).

## ಒಬ್ಬ ಕ್ರೈಸ್ತನು: ಇಂಥಹ ಪಾಪವನ್ನು ಮಾಡಬಹುದು?

ಹೌದು, ಒಬ್ಬ ಕ್ರೈಸ್ತನು ಈ ಹಂತವನ್ನು ತಲುಪಬಹುದು. ಅವನು ಕಠಿಣ ಹೃದಯವುಳ್ಳವನು ಹಾಗೂ ಮನಸ್ಸಾಕ್ಷಿ ಸತ್ತವನು ಆಗಿರಲು ಸಾಧ್ಯವಿದೆ. ಇದರಿಂದ ಅವನ ಪಾಪವು ಅವನ ಮೇಲೆ ಜಯ ಹೊಂದುವಂತೆ ಮಾಡಿಕೊಂಡಿದ್ದಾನೆ!

ಅದ್ದರಿಂದ ಅವನಿಗೆ ಪಾಪದ ಮೇಲಿನ ಜಯ ಸಹಜವಾಗಿರುವದಿಲ್ಲ. ಅವನು ಸತ್ಯವನ್ನು ಹಿಡಿದುಕೊಳ್ಳದೆ ದೇವರ ಆಜ್ಞೆಗಳನ್ನು ಪಾಲಿಸದೆ ಬೆಳಕಿನಲ್ಲಿ ನಡೆಯದೆ, ಸಹೋದರರನ್ನು

ಪ್ರೀತಿಸದೆ ಹೋದರೆ, ಅವನು ಮರಣಕ್ಕೆ ನಡೆಸುವ ಪಾಪಕ್ಕೆ ಒಳಗಾಗಿದ್ದಾನೆ!

ಒಬ್ಬನು ದ್ವಿಚಕ್ರ ವಾಹನದಲ್ಲಿ ಕಡಿದಾದ ಸ್ಥಳದಲ್ಲಿ ಹೋಗುವಾಗ ಅದು ಸರಳವಾಗಿರುತ್ತದೆ, ಆದರೆ ಎತ್ತರವಾದ ಸ್ಥಳದಲ್ಲಿ ಹೋಗುವಾಗ, ತಕ್ಷಣವೇ ಅವನು ಕಡಿದಾದ ಸ್ಥಳಕ್ಕೆ ತಿರುಗಿಕೊಳ್ಳಬಹುದು, ಅದು ಸರಳವಾಗುತ್ತದೆ. ನಿಧಾನವಾಗಿ ಅವನ ವೇಗವು ಹೆಚ್ಚುತ್ತದೆ, ಇದು ಅಪಾಯಕರವಾದದ್ದೆಂದು ತಿಳಿದು, ಅವನು ತಿರುಗಿ ಎತ್ತರದ ಸ್ಥಳಕ್ಕೆ ಬದಲಾಗಬಹುದು, ಅದು ಸುರಕ್ಷಿತವೆಂದು ತಿಳಿಯಬಹುದು. ಆದರೆ ಅವನು ಬಹಳ ವೇಗವಾಗಿ ಚಲಿಸುತ್ತಿರುವದರಿಂದ, ಹಿಂದಕ್ಕೆ ತಿರುಗಿಕೊಳ್ಳುವದು ಅಸಾಧ್ಯವಾಗಬಹುದು. ಅವನಿಗೆ ಇಷ್ಟವಿಲ್ಲದಿದ್ದರೂ, ಅವನು ಕಡಿದಾದ ಸ್ಥಳದಲ್ಲಿ ವೇಗವಾಗಿ ಚಲಿಸಿ ಅಪಾಯಕ್ಕೊಳಗಾಗುತ್ತಾನೆ.

ಇದೇ ವಿಧದಂತೆ, ಆರಂಭದಲ್ಲಿ ಪಾಪವು ಸರಳವಾಗಿ ಕಂಡರೂ, ಅದನ್ನು ಸ್ಥಗಿತಗೊಳಿಸುವದು ಅಸಾಧ್ಯವಾಗುತ್ತದೆ. ಕೆಲವು ಸಾರಿ ಜನರು "ನಾನು ಪಾಪವನ್ನು ಸ್ಥಗಿತಗೊಳಿಸಲು" ಸಾಧ್ಯ ಎಂದು ಹೇಳಬಹುದು: ಹೇಗೂ ಪಾಪವು ಒಂದು ಚಟವಾಗಿ ಪರಿವರ್ತನೆಗೊಳ್ಳುತ್ತದೆ. ಪಾಪವನ್ನು ಅಭ್ಯಾಸಿಸುವಾಗ, ಅದು ಅಧಿಕಗೊಳ್ಳುತ್ತದೆ. ಅವನು ಪಾಪ ಮಾಡುತ್ತಾ ಕಡಿದಾದ ಸ್ಥಳಕ್ಕೆ ಇಳಿದು ಹೋಗುತ್ತಾನೆ. ಒಂದು ವೇಳೆ, ಇದು ಬಹಳ ಅಪಾಯಕರ, ನಾನು ಹಿಂದಿರುಗುತ್ತೇನೆ ಎಂದು ಅವನು ಹೇಳಬಹುದು. ಆದರೆ ಅದು ಅವನಿಗೆ ಅಸಾಧ್ಯವಾಗಿರಬಹುದು, ಅವನ ಮನಸ್ಸಾಕ್ಷಿ ಸತ್ತು ಹೋಗಿ ಹೃದಯವು ಕಠಿಣವಾಗಿರಬಹುದು, ಅವನು ಪಶ್ಚಾತ್ತಾಪ ಪಡಲು ಅಸಾಧ್ಯವಾಗಬಹುದು, ಆ ಪಾಪವು ಅವನನ್ನು ಮರಣಕ್ಕೆ ನಡೆಸುತ್ತದೆ. ಅವನು ಪಾಪವನ್ನು ಜಯಿಸದೆ, ಪಾಪವು ಅವನನ್ನು ಜಯಿಸಿದೆ.

## ಮುಕ್ತಾಯ

ನಿನ್ನ ಪರಿಸ್ಥಿತಿ ಏನು? ಕ್ರಿಸ್ತನ ಮೂಲಕ ಪಾಪವನ್ನು ಜಯಿಸಬಹುದೋ, ಅಥವಾ ಪಾಪವು ನಿನ್ನನ್ನು ಜಯಿಸಬಹುದೋ? ಈ ರೀತಿ ಇರುವದಾದರೆ ನಿನ್ನ ಪರಿಸ್ಥಿತಿಯನ್ನು ಬದಲಾಯಿಸಿಕೋ, ನಿನಗೆ ದೊರಕಿದ ಪಾಪ ನಿವಾರಣೆಯ ಸಿದ್ಧಾಂತವನ್ನು ನೀನು ಅಳವಡಿಸಿಕೊಂಡರೆ (ರೋಮಾಪುರ 6:17, 18). ಪಾಪ ಕ್ಷಮೆಯನ್ನು ಹೊಂದಿ ಕ್ರಿಸ್ತನನ್ನು ಪ್ರಭುವನ್ನಾಗಿ ಅಂಗೀಕರಿಸಿಕೋ, ಪಶ್ಚಾತ್ತಾಪ ಪಟ್ಟು, ನಂಬಿಕೆಯಿಂದ, ಹಾಗೂ ದೀಕ್ಷಾಸ್ನಾನ ಹೊಂದುವದರಿಂದ ನೀನು ಒಬ್ಬ ಕ್ರೈಸ್ತನಾಗಬಹುದು. ನೀರಿನ ಸ್ನಾನದಿಂದ ಪಾಪದ ಮೇಲೆ ಜಯಹೊಂದಿ ನೀನು ಹೊರಬರಬಹುದು! ಒಂದು ವೇಳೆ ನೀನು ಕ್ರೈಸ್ತನಾಗಿದ್ದು, ಪಾಪದ ನಿಮಿತ್ತ ಕಡಿದಾದ ಸ್ಥಳದಲ್ಲಿ ಹೋಗುತ್ತಿರುವದಾದರೆ, ಪಾಪವನ್ನು ಅರಿಕೆ ಮಾಡಿ ಕ್ರಿಸ್ತನ ಕಡೆಗೆ ತಿರುಗಿಕೊಳ್ಳಬಹುದು, ಆಗ ನೀತಿವಂತನು, ನಂಬಿಗಸ್ತನೂ ಆಗಿರುವಂತಹ ದೇವರು ನಿನ್ನನ್ನು ಕ್ಷಮಿಸುತ್ತಾನೆ!

ಮರಣಕ್ಕೆ ಒಳಗಾಗುವಂತೆ ಮಾಡುವ ಪಾಪಕ್ಕೆ ಒಳಗಾಗಿರುವದಾದರೆ, ನನ್ನ ಮಾತನ್ನು ಆಲಿಸು. ಅಂತಹ ಪಾಪ ಮಾಡಿರುವದಿಲ್ಲ ಎಂದಿದ್ದರೂ, ನರಕದ ದಾರಿಯು ಕಡಿದಾಗಿರುವದರಿಂದ, ಮಾನಸಾಂತರ ಪಡು, ತಡ ಮಾಡಿದಷ್ಟ ಹೃದಯವು ಕಠಿಣ ವಾಗುತ್ತದೆ, ಈ ದಿನವೇ ಮಾಡಬೇಕಾದ ಬದಲಾವಣೆಯನ್ನು ಮಾಡಿಕೋ!

ಕ್ರಿಸ್ತನ ಮೂಲಕ ಪಾಪದ ಮೇಲಿನ ಜಯ ಖಚಿತ ಆಯ್ಕೆಯು ನಿನ್ನದಾಗಿದೆ. ಪಾಪದ ಮೇಲೆ ಜಯವೋ ಅಥವಾ ನರಕಕ್ಕೆ ತಳ್ಳುವ ಪಾಪವು ನಿನ್ನನ್ನು ಜಯಿಸುತ್ತದೋ, ಪರೀಕ್ಷಿಸಿಕೋ?

**ಟಿಪ್ಪಣಿ**

[1]**ಮುಕ್ತಾಯದ ವಾಕ್ಯಭಾಗದಲ್ಲಿ,** Tom L. Bright, "Difficult Passages in 1, 2, 3 John, No. III," *Denton Lectures* (1987), 402-6; Guy N. Woods, *A Commentary on the New Testament Espistles of Peter, John, and Jude* (Nashville: Gospel Advocate Co., 1983), 319-22.